## ಪದಬಂಧ




ಎಡದಿಂದ ಬಲಕ್ಕೆ

1. ಅಂದಗಾತಿಯದು ಈಗ ಅತ್ಯಂತ ಕೀಳು ಸ್ಥಿತಿ (4)
3. ವ್ಯಾಯಾಮವನ್ನು ಆರಂಭಿಸಿದ್ದು ಪಕ್ಷದ ಒಂಬತ್ತನೆಯ ದಿನ (3)
4. ಮನೆ ಮನೆಗೂ ಅಲ್ಲಿ ಎಂಥ ಹೊಳಪು! (3)
6. ಕಂತು ಕಟ್ಟುವವರ ನಡು ನಡುವೆಯೇ ವಿರೋಧ ಎದ್ದಿದೆ (4)
7. ಕನ್ನ ಕೊರೆದವನು ಅಡಗಿ ಕುಳಿತಿದ್ದ ಕಾಡು ಗೊತ್ತೇ? (3)
9. ಮೋಹಿನಿಯ ಪಾತ್ರ ನಿರ್ವಹಿಸಿದ ಮಹಿಳೆ ಈಕೆ (3)
11. ಪಂದ್ಯಕ್ಕೆ ಬಂದ ಎಲ್ಲರಿಗೂ ಪಾರಿತೋಷಕವೇ? (3)
13. ಕುಶಲ ನೇಕಾರನ ಕೆಲಸ ತುಂಬ ಕಷ್ಟ, ನಿರ್ದಿಷ್ಟ (3)
15. ಸಮೃದ್ಧವಾದದ್ದನ್ನು ಕಂಡ ನಂತರವೇ ನೆಮ್ಮದಿ (4)
17. ಹಾಗೆ ಲಾಭ ತರಿಸುವಲ್ಲಿ ಯಾವುದೇ ತ್ರಾಸ ಇಲ್ಲ (3)
18. ದೇವತಾ ದರ್ಶನ ಪಡೆಯಲು ಎಂಥ ಅವಸರ! (3)
19. ಜೀವನವನ್ನೆಲ್ಲ ಕಾಡಲ್ಲೇ ಕಳೆಯುವ ಪ್ರಾಣಿ (4)

ಮೇಲಿಂದ ಕೆಳಕ್ಕೆ

1. ಆಮಂತ್ರಣ ಪಡೆದಾಗ ಸಿಕ್ಕ ಆನಂದಕ್ಕೆ ಪಾರವೇ ಇಲ್ಲ (3)
2. ಮೂರ್ತಿಯ ಮಾತು ಮಾತಿನಲ್ಲೂ ಎಂಥ ಸೊಕ್ಕು, ಗರ್ವ! (3)
3. ನಾಳಿದ್ದನ ಆಚರಣೆಗೆ ತಾವರೆಯೇ ಬೇಕು (3)
5. ಇದು ಮಂಗನದೇ ಕೆಲಸ ಎಂಬ ಸಂಶಯ (3)
7. ಕಾಪಾಡಲೇಬೇಕಾದ ಪುಟ್ಟ ಪ್ರಾಣಿ – 'ಅಡವಿ ಮಗು' (4)
8. ನೆನೆದರೇ ಪುಳಕ ತರುವಂಥ 'ರಾಜನ ಅಡಿಗೆ' (4)
9. ಮಹನೀಯನ ಮರ್ಯಾದೆಗೇ ಭಂಗವಾಯಿತು (4)
10. ನೊಂದವರನ್ನು ಹಿಂಸಿಸಿದರೆಂಬ ಸುದ್ದಿಗೆ ತಳ – ಬುಡ ಇಲ್ಲ (4)
12. ಹದಗೆಡಿಸುವ ವಸ್ತುಗಳನ್ನೆಲ್ಲ ಸುಟ್ಟುಹಾಕು (3)
14. ನಿರಂತರ ಕಾಡುವಂತಹದು – ನವೆ, ತುರಿಕೆ (3)
15. ಆಕೆಯ ಸ್ವಭಾವ ಬದಲಾಗುವ ಸಾಧ್ಯತೆ ಇದೆಯೇ? (3)
16. ಗೋವಿನ ದಾನದ ಕ್ರಮವೇ ಇಲ್ಲಿ ತಲೆಕೆಳಗು (3)

### 19–03–15ರ ಉತ್ತರಗಳು

ಎಡದಿಂದ ಬಲಕ್ಕೆ

1. ಅನಂತ; 3. ಪ್ರಪಂಚ; 4. ಗಾವಿಲ; 6. ನಿರಂತರ; 7. ಅಂತರ್ಜಲ; 9. ಮರ್ತ್ಯಲೋಕ; 11. ಅನುಯಾಯಿ; 15. ನಮನ; 16. ಹರಸು; 17. ವಿರಸ

ಮೇಲಿಂದ ಕೆಳಕ್ಕೆ

1. ಅಚಲ; 2. ತಗಾದೆ; 3. ಪ್ರಪಾತ; 5. ಲಕ್ಷಿತ; 6. ನಿರ್ನಾಮ; 8. ಲಡಾಯಿ; 10. ಲೋಚನ; 12. ನುಡಿಸು; 13. ಮನವಿ; 14. ಸಾಹಸ

## ಪ್ರಶ್ನಾಂಕಣ

# ಶುಕ್ರ ಗ್ರಹ-ಏನು ವೈಶಿಷ್ಟ್ಯ?

ನಮ್ಮ ಸೌರವ್ಯೂಹದ ಎಂಟೂ ಗ್ರಹಗಳಲ್ಲಿ ಪೃಥ್ವಿಯ ನಂತರದ ಅತ್ಯಂತ ದೃಗ್ಗೋಚರ ಗ್ರಹವಾದ ಶುಕ್ರ ಅಷ್ಟೇ ಸುಪ್ರಸಿದ್ಧ ಕೂಡ. ಹಲವಾರು ಲಕ್ಷಣಗಳಲ್ಲಿ ಪೃಥ್ವಿಯನ್ನೇ ಹೋಲುವ, ಇನ್ನು ಹಲವಾರು ಗುಣಗಳಲ್ಲಿ ಅನನ್ಯ ದಾಖಲೆಗಳನ್ನು ಸೃಜಿಸಿರುವ ಈ ಗ್ರಹದ ಪ್ರಧಾನ ವೈಶಿಷ್ಟ್ಯಗಳು ಇವು:

ಶುಕ್ರ ಸೌರವ್ಯೂಹದ ಅತ್ಯಂತ ಉಜ್ವಲ ಗ್ರಹ. ಶೇಕಡ 98 ರಷ್ಟು ಇಂಗಾಲದ ಡೈ ಆಕ್ಸೈಡ್ ಭರಿತ ವಾಯುಮಂಡಲದಿಂದಾಗಿ (ಚಿತ್ರ – 1) ಈ ಗ್ರಹ ಸೂರ್ಯನ ಬೆಳಕನ್ನು ಕನ್ನಡಿಯಂತೆ ಪ್ರತಿಫಲಿಸುತ್ತದೆ. ಹಾಗಾಗಿ ಬೆಳಗು – ಬೈಗುಗಳಲ್ಲಿ ಪೂರ್ಣ ಚಂದ್ರನ ನಂತರದ ಅತ್ಯಂತ ಹೊಳಪಿನ ಕಾಯವಾಗಿ ಗೋಚರಿಸುತ್ತದೆ (ಚಿತ್ರ – 3).

ಶುಕ್ರ ಭೂಮಿಗೆ ಚಂದ್ರನ ನಂತರದ ಅತ್ಯಂತ ಹತ್ತಿರದ ಕಾಯ. ಬಹುದಿನಗಳಲ್ಲಿ ಭೂಮಿಯನ್ನೇ ಹೋಲುವ ಈ ಗ್ರಹದ್ದು ಭೂಮಿಯ ಶೇ 95 ರಷ್ಟು ವ್ಯಾಸ; ಶೇ 80 ರಷ್ಟು ದ್ರವ್ಯರಾಶಿ; ಶೇ 95 ರಷ್ಟು ಸಾಂದ್ರತೆ; ಶೇ 90 ರಷ್ಟು ಗುರುತ್ವ, ಆದ್ದರಿಂದಲೇ 'ಧರೆಯ ಸೋದರಿ' ಎಂದು ಶುಕ್ರ ಪ್ರಸಿದ್ಧ.

ಆಂತರ್ಯದ ನಿರ್ಮಿತಿಯಲ್ಲೂ ಶುಕ್ರ ಭೂ ಸದೃಶ. ಈ ಗ್ರಹದ ಆಂತರ್ಯದ್ದೂ ನಾಲ್ಕು ಪ್ರಧಾನ ಪದರಗಳ ರಚನೆ: 'ಘನ ಕಬ್ಬಿಣದ ಒಳಗರ್ಭ, ದ್ರವ ಕಬ್ಬಿಣದ ಹೊರಗರ್ಭ, ಶಿಲಾಪಾಕ ತುಂಬಿದ ಕವಚ ಹಾಗೂ ಸಿಲಿಕೇಟ್ ಶಿಲೆಗಳ ತೆಳ್ಳನ್ನ ತೊಗಟೆ' (ಚಿತ್ರ – 2).

ಸೌರವ್ಯೂಹದ ಅತ್ಯಂತ ಬಿಸಿ ಗ್ರಹವಾಗಿರುವುದು ಶುಕ್ರಗ್ರಹದ ದಾಖಲೆ. ಇಂಗಾಲದ ಡೈ ಆಕ್ಸೈಡ್ ಭರಿತ ವಾತಾವರಣದಿಂದಾಗಿ ಶುಕ್ರಗ್ರಹದಲ್ಲಿ 'ಹಸಿರು ಮನೆ ಪರಿಣಾಮ' ಗರಿಷ್ಠ, ಅತಿ ತೀವ್ರ, ಪರಿಣಾಮವಾಗಿ ಅಲ್ಲಿನ ನೆಲದ ತಾಪ ಸರಾಸರಿ 460 ಡಿಗ್ರಿ ಸೆಲ್ಷಿಯಸ್‌ಗೂ ಅಧಿಕ. ಜೊತೆಗೆ ಭೂ ವಾಯುಮಂಡಲದ ತೊಂಬತ್ತು ಮಡಿ (ಪಟ್ಟು) ಒತ್ತಡ ಮತ್ತು ನೀರು – ಆಮ್ಲಜನಕ ರಾಹಿತ್ಯವೂ ಸೇರಿ ಶುಕ್ರದ ಪರಿಸರ ನೈಜ ನರಕ.




ಅತ್ಯಂತ ನಿಧಾನದ ಸ್ವಭ್ರಮಣ ಶುಕ್ರಗ್ರಹದ ಇನ್ನೊಂದು ವಿಶೇಷ. ಅದರ ಸ್ವಭ್ರಮಣ ಎಷ್ಟು ಮಂದಗತಿಯದೆಂದರೆ ಅದು ಒಮ್ಮೆ ಸುತ್ತಲೂ (ಎಂದರೆ ಅಲ್ಲಿ ಒಂದು ದಿನ ಮುಗಿಯಲು) 243 ಭೂ ದಿನಗಳಷ್ಟು ಅವಧಿ ಬೇಕು! ಆದರೆ ಸೂರ್ಯನನ್ನು ಸುತ್ತಿ ಬರಲು (ಎಂದರೆ ಒಂದು ವರ್ಷ ಮುಗಿಯಲು) ಭೂಮಿಯ 225 ದಿನಗಳು ಸಾಕು. ಹಾಗೆಂದರೆ ಶುಕ್ರ ಗ್ರಹದಲ್ಲಿ ಒಂದು ದಿನಕ್ಕಿಂತ ಕಡಿಮೆ ಕಾಲದಲ್ಲೇ ಒಂದು ವರ್ಷವೇ ಮುಗಿದಿರುತ್ತದೆ! ಇದು ಶುಕ್ರಗ್ರಹದ ಅತ್ಯಂತ ವಿಚಿತ್ರ ವಿಪರ್ಯಾಸಗಳ ವಿಶೇಷ.

■ ಎನ್. ವಾಸುದೇವ್